ಶ್ರೀ ಸಿದ್ಧರಾಮಯ್ಯ :– ಪುಟ್ಟೇಗೌಡರೆ, ನೀವು ಹೇಳುವುದೂ ಸರಿಯೇ. 1997–98 ರಲ್ಲಿ ಕೋಕನಟ್ ಬೋರ್ಡ್‌ನವರು ಕೆಲವರಿಗೆ ಕೊಟ್ಟಿರುವುದು ನಿಜ. ಇಲ್ಲವೆಂದು ಹೇಳುತ್ತಿಲ್ಲ. ಆಮೇಲೆ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈಗ ಕೊಡುತ್ತಿಲ್ಲ. ಆದ್ದರಿಂದ, ಈ ಕಾರ್ಯಕ್ರಮವನ್ನು ಮತ್ತೆ ನಾವು ಪರಿಶೀಲನೆ ಮಾಡುತ್ತೇವೆ. ಇದನ್ನು ಕೋಕನಟ್ ಬೋರ್ಡ್‌ನವರು ಕೊಡುತ್ತಿದ್ದುದು, ಸರ್ಕಾರದಿಂದ ಕೊಡುತ್ತಿದ್ದುದ್ದಲ್ಲ, ಅದರ ಪರಿಶೀಲನೆ ಮಾಡಿ, ಅದರ financial implications ಎಲವನ್ನೂ ನೋಡಿ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಕೋಕನಟ್ ಬೋರ್ಡ್‌ಕೂಡ ತೆಂಗು ಬೆಳೆಗಾರರನ್ನು ಕೈಬಿಟ್ಟಾಯಿತು. 'ರೈತರ ಪರ ನಾವು' ಎಂದು ಹೇಳುತ್ತಿರುವಂಥ ಸರ್ಕಾರ ಕೂಡ ಆ ರೈತರನ್ನು ಕೈಬಿಟ್ಟಾಯಿತು. ಈ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಇವರಿಗಿಂತಲೂ ರೈತ ವಿರೋಧಿಗಳು ಈ ಜಗತ್ತಿನಲ್ಲೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :– ತುಂಬಾ ಸಂತೋಷ.

ಶ್ರೀ ಸಿದ್ಧರಾಮಯ್ಯ :– ಇಂತಹ ರೈತ ವಿರೋಧಿಗಳು ಜಗತ್ತಿನಲ್ಲೇ ಸಿಕ್ಕುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಮಾನ್ಯ ಸದಸ್ಯರು :– ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಇವರ ಕಾಲದಲ್ಲೇ.

ಮಾನ್ಯ ಸದಸ್ಯರು :– ಈಗ ಕೇಂದ್ರದಲ್ಲಿ ಅಧಿಕಾರ ಮಾಡದಿದ್ದರೂ ಬೇರೆ ಸಮಯದಲ್ಲಿ ಅಧಿಕಾರದಲ್ಲಿದ್ದಾಗ ರೈತರ ಪರವಾಗಿ ಇವರು ಏನು ಮಾಡಿದರು?

(ಗೊಂದಲ)

ಮಾನ್ಯ ಸದಸ್ಯರು :– ಆರು ವರ್ಷ ಕೇಂದ್ರ ಸರ್ಕಾರವನ್ನು ನಡೆಸಿದರು. ರೈತರಿಗೆ ಒಂದು ರೂಪಾಯಿಯನ್ನೂ ಕೊಡಲಿಲ್ಲ.

(ಗೊಂದಲ)

ಮಾನ್ಯ ಸದಸ್ಯರು :– ರೈತರ ಪರವಾಗಿ ಮೊಸಳೆ ಕಣ್ಣೀರಿಡುತ್ತಿರುವ ಬಿಜೆಪಿಯವರಿಗೆ ಧಿಕ್ಕಾರ.